ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ(ಮ.ಉ.ಯೋ) ಕೆ.ಜಿ ರಸ್ತೆ, ಬೆಂಗಳೂರು-2.
ಸಂಖ್ಯೆ.(ಎಂ3) ಎಂ2.ಅ.ದಾ. ಔ.ಹಂ 51/ 05-06 ದಿನಾಂಕ: 03-06-2006

## ಸುತ್ತೋಲೆ

**ವಿಷಯ:** ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ 1 ರಿಂದ 7 ನೇ ತರಗತಿಯ ವಿದ್ಯಾರ್ಥಿಗಳಿಗೆ ಬಿಸಿಊಟದ ಜೊತೆ ಮಾತ್ರೆಗಳನ್ನು ನೀಡುವ / ಶೇಖರಿಸುವ ವಿಧಾನವನ್ನು ಅನುಸರಿಸುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿ ಸುತ್ತೋಲೆ ಸಂಖ್ಯೆ. ಎಂ2. ಅ.ದಾ. ಪೌ.ಮಾ. 14/2004-05.
2. ಸಹಾಯಕ ಪೌಷ್ಠಿಕಾಧಿಕಾರಿಗಳು, ಸಹ ನಿರ್ದೇಶಕರವರ ಕಛೇರಿ (ಮ.ಉ.ಯೋ) ರವರ ವರಸಿ ದಿನಾಂಕ 30-05-2005.
3. ಸ.ಔ.ಮ. ಖರೀದಿ/23/ 05-06 ದಿ: 26-05-2006, ಅಪರ ನಿರ್ದೇಶಕರು ಸರ್ಕಾರಿ ಔಷಧಿ ಮಳಿಗೆ,ಮಾಗಡಿ ರಸ್ತೆ, ಬೆಂಗಳೂರು.

***

ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳ 1 ರಿಂದ 7 ನೇ ತರಗತಿಯ ವಿದ್ಯಾರ್ಥಿಗಳಿಗೆ ಬಿಸಿಊಟದ ಜೊತೆ ಮಾತ್ರೆಗಳನ್ನು ನೀಡುತ್ತಿರುವುದು ಸರಿಯಷ್ಟೆ. ಇವುಗಳ ಉಪಯೋಗ ಹಾಗೂ ಶೇಖರಿಸುವ ವಿಧಾನವನ್ನು ಅನುಸರಿಸದೆ ಸರಿಯಾಗಿ ಉಪಯೋಗ ಮಾಡದಿರುವುದು ಇಲಾಖಾ ಗಮನಕ್ಕೆ ಬಂದಿರುತ್ತದೆ. ಆ ಕಾರಣದಿಂದ ಉಲ್ಲೇಖ (1) ರ ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಲಾಗಿದ್ದ ಮಾಹಿತಿಯನ್ನು ಮುಂದುವರಿಸುತ್ತಾ ಉಲ್ಲೇಖ(3) ರ ಅಪರ ನಿರ್ದೇಶಕರು ಸರ್ಕಾರಿ ಔಷಧಿ ಮಳಿಗೆ ರವರು ವಿಟಮಿನ್ 'ಎ' 2 ಲ್ಯಾಕ್ ಐ.ಯು ಮಾತ್ರೆಗಳ ಬಳಕೆ ಹಾಗೂ ಸಂಗ್ರಹಣೆ ಬಗ್ಗೆ ತಿಳಿಸಿರುತ್ತಾರೆ. ಸದರಿ ಅಂಶಗಳನ್ನು ಒಳಗೊಂಡಂತೆ ಮತ್ತೊಮ್ಮೆ ಮಾತ್ರೆಗಳ ಬಳಕೆ ಹಾಗೂ ಶೇಖರಣೆಯ ಬಗ್ಗೆ ಕರಪತ್ರದ ಮಾದರಿ ನೀಡಲಾಗಿದೆ. ಸಹಾಯಕ ಪೌಷ್ಠಿಕಾಧಿಕಾರಿಗಳ ವರದಿಯ ಮೇರೆಗೆ ಈ ಸುತ್ತೋಲೆಯೊಡನೆ ಲಗತ್ತಿಸಿರುವ ಕರ ಪತ್ರದ ಮಾದರಿಯಂತೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುದ್ರಿಸಿ ಆಯಾ ತಾಲ್ಲೂಕಿಗೆ ಸಂಬಂಧ ಪಟ್ಟ ಎಲ್ಲಾ ಶಾಲೆಗಳಲ್ಲಿ ಸ್ಥಿರೀಕರಿಸಿ ಹಾಗೂ ಗೋಡೆಗೆ ನೇತು ಹಾಕಲು ತಿಳಿಸಿದೆ. ಸದರಿ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಕಟ್ಟುನಿಟ್ಟಾಗಿ ಮಾತ್ರೆಗಳ ಉಪಯೋಗ ಹಾಗೂ ಶೇಖರಿಸುವ ವಿಧಾನವನ್ನು ಕಡ್ಡಾಯವಾಗಿ ಅನುಸರಿಸಲು ಶಾಲಾ ಮುಖ್ಯೋಪಾಧ್ಯಾಯರಿಗೆ ತಿಳಿಸಲು ಆದೇಶಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
8/6 06

ಪ್ರತಿಯನ್ನು:-

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಕಾರ್ಯಕ್ರಮ ಜಿಲ್ಲಾ ಪಂಚಾಯತ್
3. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆ
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
5. ಕಛೇರಿ ಪ್ರತಿ.